ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 9-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಾದಾರರ ಕುರಿತ ಐತಿಹ್ಯಗಳು

**ಮಂಜು ಜೆ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***

*ಜನಪದರಲ್ಲಿ ಮಾದಾರ ಪದದ ಮೂಲವನ್ನು ಕುರಿತ ಸ್ವಾರಸ್ಯಕರ ಸಂಗತಿ ಈ ರೀತಿಯಾಗಿದೆ. ಮಾದಿಗ ಪದ ತೆಲುಗು ಮೂಲವಾದುದರಿಂದ ತೆಲುಗು ಅರ್ಥಕೋಶದಲ್ಲಿ ಈ ವೃತ್ತಿಗೆ ಸಂಬಂಧಿಸಿದಂತೆ ಅರ್ಥಕೊಡಲಾಗಿದೆ. ಅದರ ಪ್ರಕಾರ "ಮಾದಿಗ ಅಂದರೆ ಮತಂಗ 'ಮಾದಿಗವಾಡು ಚಪ್ಪಲು ಕಟ್ಟುವಾಡು ಮಾದಿಗದಿ"[1] ಎಂಬ ಉಲ್ಲೇಖಗಳಿವೆ ಈ ಪ್ರಕಾರ "ಮಾದಿಗ ಎಂದರೆ ಚಪ್ಪಲಿ ಹೊಲಿದು ಬದುಕುವ ಜಾತಿ, ವ್ಯವಸಾಯಕ್ಕೆ ಬೇಕಾದ ಕಪಿಲೆ ಬಾನಿ. ಚರ್ಮಪಟ್ಟೆ ಇತ್ಯಾದಿಗಳನ್ನು ಸಿದ್ಧಪಡಿಸಲು ಚರ್ಮ ಮೂಲವಸ್ತುವಾದ್ದರಿಂದ, ಅದನ್ನು ಪಡೆಯಲು ದನಗಳನ್ನು ಕಡಿಯುತ್ತಿದ್ದರಿಂದ ಬೇರೆಯವರಿಗೆ ಗೋಹಿಂಸಕರಾಗಿ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಚರ್ಮಗಾರಿಕೆಯ ಕಸುಬಾದ ಮಾದಿಗರಿಗೆ ಈ ವೃತ್ತಿ ಮೂಲದ ಹೆಸರು ಬಂದಿರಬಹುದು."[2] ಪ್ರಸ್ತುತ ಲೇಖನದಲ್ಲಿ ಮಾದಿಗ ಸಮುದಾಯದ ಐತಿಹ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಮಾದಿಗ, ಮಾದಾರ, ಮಾತಂಗ, ಶೋಷಿತ ಸಮುದಾಯ, ಐತಿಹ್ಯಗಳು.*

### ಪೀಠಿಕೆ

ಮಾದಿಗರನ್ನು ಕುರಿತಾಗಿ ಅನೇಕ ಪುರಾಣ ಮತ್ತು ಐತಿಹ್ಯಗಳಿವೆ ಈ ರೀತಿ ಐತಿಹ್ಯಗಳನ್ನು ಕುರಿತು ಚರ್ಚಿಸುವುದಾದರೆ ವಾಸ್ತವವಾಗಿ ನಡೆಯಿತ್ತೆಂದು ಹೇಳಲಾಗುವ ಘಟನೆಯ ಸುತ್ತ ಹುಟ್ಟಿಕೊಳ್ಳುವ ವಿವರಗಳೆ ಆಗಿವೆ. ಯಾವುದೋ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಥೆಗಳೆ ಐತಿಹ್ಯಗಳು. ಐತಿಹ್ಯಗಳು ಜಗತ್ತಿನ ಎಲ್ಲಾ ಜನಪದ ವರ್ಗಗಳಲ್ಲೂ ಕಂಡುಬರುತ್ತವೆ. "ಚಿತ್ರದುರ್ಗ ಜಿಲ್ಲೆಯ ಬಯಲುನಾಡಿನ ಮಾದಿಗರಲ್ಲಿ ಅವರ ವರ್ಗಕ್ಕೆ ಸಂಬಂಧಿಸಿದ ಅನೇಕ ಐತಿಹ್ಯಗಳಿವೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಸಮೀಪದ ಧರ್ಮಪುರಕ್ಕೆ ಹಿಂದೆ ಉಪವಾಸಪುರ ಎಂಬ ಹೆಸರಿತ್ತಂತೆ. ಪಾಂಡವರು ಅಂದು ಐದು ಮಂದಿಯು ಹಸಿದು ಬಂದು ಹಳ್ಳಿಯ ಎಲ್ಲಾ ಮನೆಯಲ್ಲೂ ಬೇಡಿದರೂ ತುತ್ತು ಅನ್ನ ದೊರೆಯಲಿಲ್ಲವಾದ್ದರಿಂದ ಉಪವಾಸ ಮಲಗಿದರು ಮತ್ತು ಈ ಊರಿನಲ್ಲಿ ನಿತ್ಯವು ಐದು ಮಂದಿ ಉಪವಾಸವಿರಲೆಂದು ಶಾಪವಿತ್ತರಂತೆ"[3]

ಮಾದಿಗರ ಶ್ರವಣಪ್ಪ ಧರ್ಮಪುರದ ಕೆರೆಯ ನೀರುಗಂಟಿಯಾಗಿದ್ದ ಒಂದು ದಿನ ಆ ಕೆರೆ ಏರಿಯ ಮೇಲೆ ಮಲಗಿದ್ದಾಗ ಜೋರಾಗಿ ಮಳೆ ಬಂದು ಕೆರೆ ತುಂಬಿ ನೀರು ತುಳುಕಾಡ ತೊಡಗಿತಂತೆ. ನೀರ್ಗಂಟಿ ಶ್ರವಣಪ್ಪ ಎಚ್ಚರಗೊಂಡು ಏರಿಯ ಮೇಲೆ ನಿಂತು ನೋಡಿದ. ಅಪಾರವಾದ ಜಲಸಂಪತ್ತು ತುಂಬಿತ್ತು. ಆಗ ಅವನ ಎದುರು ಗಂಗಾಮಾತೆ ಪ್ರತ್ಯಕ್ಷಳಾಗಿ 'ನಾನು ಈ ಕೆರೆಯಿಂದ ಹೊರಹೋಗಬೇಕು ನನ್ನನ್ನು ತಡೆಯಬೇಡ ಎಂದಳಂತೆ. ಗಂಗೆ ಇಲ್ಲಿಂದ ಮುಂದೆ

***Please cite this article as:*** ಮಂಜು, ಜೆ. (2025). ಮಾದಾರರ ಕುರಿತ ಐತಿಹ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(6), 9–11

ಹರಿದು ಹೋಗುವುದರಿಂದ ಜನ ಜಾನುವಾರುಗಳಿಗೆ ಅಪಾರ ನಷ್ಟ ಉಂಟಾಗುವುದೆಂದು, ತಾಯಿ ನೀನು ಮುಂದೆ ಹೋಗಬೇಡ ನಿನಗೆ ಏನು ಬೇಕು ಎಂದು ಕೇಳುತ್ತಾನೆ. ನಾನು ಇಲ್ಲೆ ನೆಲೆ ನಿಲ್ಲಲ್ಲು ಮನುಷ್ಯನೊಬ್ಬನನ್ನು ಆಹುತಿ ಕೊಡಬೇಕು ಎನ್ನುವಳು. ಶ್ರವಣಪ್ಪ ಹಾಗೆ ಆಗಲಿ ತಾಯಿ ನಾನು ಈಗಲೇ ಹೋಗಿ ಗೌಡ, ಗೊಂಚಿಗಾರ–ತೋಟಿ ತಳವಾರ, ಅವರನ್ನು ಕರೆದು ತರುವೆ ಎಂದು ಅಲ್ಲಿಯವರೆಗೂ ಜಾಗ ಬಿಟ್ಟು ಕದಲ ಬೇಡ ಎಂದು ಭಾಷೆ ಕೇಳುತ್ತಾನೆ. ಗಂಗೆಯು ತಾನು ಎಲ್ಲೂ ಹೋಗುವುದಿಲ್ಲ ಎಂದು ಭಾಷೆ ಕೊಡುತ್ತಾಳೆ. ಶ್ರವಣಪ್ಪ ಊರ ಮುಖಂಡರನ್ನು ಕಂಡು ವಿಷಯ ತಿಳಿಸುತ್ತಾನೆ. ವಿಚಾರ ತಿಳಿದ ಮುಖಂಡರು ಭಯಗ್ರಸ್ಥರಾಗಿ ಮುಂದೇನು ಎಂದು ಯೋಚಿಸಿ ಅವರ ಎದುರಿಗಿದ್ದ ಶ್ರವಣಪ್ಪನನ್ನೆ ಸಮಸ್ಯೆಗೆ ಪರಿಹಾರವೆಂದು ಭಾವಿಸಿ ಶ್ರವಣಪ್ಪನನ್ನು ಕಳುಹಿಸಿದರೆ ತಾನೆ ಗಂಗೆ ಹರಿದು ಮುಂದೆ ಹೋಗುವುದು ಎಂದು ಮುಖಂಡರೆ ತಮ್ಮಂತಲ್ಲೆ ಮಾತಾಡಿಕೊಂಡು ಅವನನ್ನೆ ಕೆರೆಗೆ ಆಹುತಿ ಕೊಟ್ಟರಂತೆ ಊರಿನ ಕಲ್ಯಾಣಕ್ಕಾಗಿ ಲೋಕಹಿತಕ್ಕಾಗಿ ಬಲಿಯಾದ ಶ್ರವಣಪ್ಪನ ತ್ಯಾಗ ಅತ್ಯಮೂಲ್ಯವಾದುದು ಈ ಐತಿಹ್ಯ ಮಾದಿಗರ ತ್ಯಾಗದ ಕುರುಹಾಗಿದೆ.

ಚಿತ್ರದುರ್ಗ ಜಿಲ್ಲೆಯ ಬಯಲು ನಾಡಿನ ಮಾದಿಗರಲ್ಲಿ ಅವರ ವರ್ಗಕ್ಕೆ ಸಂಬಂಧಿಸಿದ ಅನೇಕ ಐತಿಹ್ಯಗಳಿಗೆ. ಎರಡುಕೆರೆ ಗ್ರಾಮದ ಗೌಡ ಕೆರೆಯೊಂದನ್ನು ಕಟ್ಟಿಸಿದ. ಕೆರೆಯ ಏರಿ ನಿಲ್ಲದೆ ಆಗಾಗ ಒಡೆದು ಹೋಗುತ್ತಿತ್ತು. ಇದರಿಂದ ಗೌಡನಿಗೆ ಚಿಂತೆಯಾಯಿತು. ರಾತ್ರಿ ಗೌಡನ ಕನಸಿನಲ್ಲಿ ಆತನ ಇಷ್ಟ ದೇವತೆ ಕಾಣಿಸಿಕೊಂಡು 'ನಿನ್ನ ಮನೆಯ ಹಿರಿಯ ಸೊಸೆಯನ್ನು ಆಹುತಿ ಕೊಟ್ಟರೆ ಕೆರೆಯ ಏರಿ ನಿಲ್ಲುವುದೆಂದು ಹೇಳಿದನಂತೆ. ಮಗ ಹೆಂಡತಿಯನ್ನು ಕೆರೆಗೆ ಹಾರ ಕೊಡಲು ಒಪ್ಪಲಿಲ್ಲ. ಗೌಡ ಚಿಂತೆಗೊಳಗಾದ ಗೌಡನ ಮನೆಯ ಆಳು ಮಗ ಗೌಡರ ಚಿಂತೆಗೆ ಕಾರಣ ತಿಳಿದುಕೊಂಡ. ಆಳು ಮಗ ಗೌಡರ ಮನೆ ಮಗನಂತಿದ್ದ ತನ್ನ ಹೆಂಡತಿ ಗೌಡರಿಗೆ ಸೊಸೆ ಇದ್ದಂತಲ್ಲವೆ? ಎಂದು ಭಾವಿಸಿ ತನ್ನ ಹೆಂಡತಿ ಬಂಧಮ್ಮಳನ್ನೇ ಕೆರೆಗೆ ಆಹುತಿ ಏಕೆ ಕೊಡಬಾರದು ಎಂದು ತನ್ನ ಇಚ್ಛೆಯನ್ನು ಗೌಡರಿಗೆ ಹೇಳಿದ. ಗೌಡ ಸಮಾಧಾನಗೊಂಡು ಕೆರೆಗೆ ಹಾರ ಕೊಡುವ ದಿನವನ್ನು ನಿಗದಿಪಡಿಸಿದ. ನಿಗದಿಪಡಿಸಿದ ದಿನ ಬಂಧಮ್ಮಳಿಗೆ ಸರ್ವಾಲಂಕಾರ ಮಾಡಿ ಗ್ರಾಮದೇವತೆಗಳಿಗೆ ಪೂಜೆ ಸಲ್ಲಿಸಿ ಮಂಗಳವಾದ್ಯಗಳೊಂದಿಗೆ ಆಹುತಿಯ ಗೂಡಿನ ಬಳಿಗೆ ಕರೆತಂದರು. ಆಹುತಿಯಾಗಲು ಇಚ್ಛಿಸದ ಬಂದಮ್ಮ ರಕ್ಷಣೆಗಾಗಿ ತನ್ನ ತವರು ಮನೆಯವರನ್ನು ಕೋರಿ ವಿಫಲಳಾಗಿದ್ದಳು. ತವರು ಮನೆಯವರು ರಕ್ಷಣೆ ಕೊಡಲಿಲ್ಲ ಎಂಬ ಕಾರಣಕ್ಕೆ ಕೋಪಗೊಂಡು ಆಹುತಿಯ ದಿನ ತನ್ನ ತವರಿನ ವಂಶಕ್ಕೆ ಹೆಣ್ಣು ಮಕ್ಕಳಾಗದಿರಲೆಂದು ಶಾಪ ಕೊಟ್ಟಳು. ಬಂಧಮ್ಮನ ವಂಶಸ್ಥರು ಇಂದಿಗೆ ಎಲ್ಲಾ ಗ್ರಾಮದಲ್ಲಿ ವಾಸಿಸುತ್ತಿದ್ದು ಆಕೆ ತವರಿನವರಿಗೆ ಇಂದಿಗೂ ಹೆಣ್ಣು ಸಂತಾನವಿಲ್ಲ. ಬಂಧಮ್ಮ ಕೆರೆಗೆ ಹಾರವಾದಳು. ಸಂತೃಪ್ತನಾದ ಗೌಡ ಬಂಧಮ್ಮನ ತವರಿನವರಿಗೆ ಹಟ್ಟಿಯ ಗುಡಿಸಲಿನಿಂದ ಕೆರೆಯವರೆಗೆ ಭೂಮಿಯನ್ನು ಉಂಬಳಿಯಾಗಿ ನೀಡುತ್ತಾನೆ. ಇಂದಿಗೂ ವರ್ಷಕ್ಕೊಮ್ಮೆ ಬಂಧಮ್ಮಳ ಹೆಸರಿನಲ್ಲಿ ಜಾತ್ರೆ ನಡೆಯುತ್ತದೆ. ಈಗಲೂ ಬಂಧಮ್ಮನ ವಂಶದವರು ಚಿತ್ರದುರ್ಗಕ್ಕೆ ಬಂದು ಎರಡುಕೆರೆ ಗ್ರಾಮಕ್ಕೆ ಹೋಗಿ ಪೂಜಿಸುತ್ತಾರೆ. ಆಕೆಯ ನೆನಪಿಗಾಗಿ ತಮ್ಮ ಮಕ್ಕಳಿಗೆ ಬಂಧಮ್ಮ ಬಂದಪ್ಪ ಎಂದು ಹೆಸರಿಡುವರು.

**ಉಪಸಂಹಾರ**

ಜನಪದ ಭಾರತದಲ್ಲಿ ಋಗ್ವೇದದ ಕಾಲದಿಂದಲೂ ಜಾನಪದದ ಮೂಲವನ್ನು ಹುಡುಕಲಾಗುತ್ತದೆ. ಜಾನಪದದ ಅತಿ ಮುಖ್ಯ ಪ್ರಕಾರಗಳಲ್ಲೊಂದು ಐತಿಹ್ಯ. **"**ವಾಸ್ತವವಾಗಿ ನಡೆದಿದೆ ಎಂದು ನಂಬಿಕೊಂಡು ಬಂದಿರುವ ಅಸಾಮಾನ್ಯ ಘಟನೆಯೊಂದರ ಕಥೆಯೇ ಐತಿಹ್ಯವೆನಿಸುತ್ತದೆ.**"**[4] ಪ್ರಾಚೀನ ಕಾಲದ ಯಾವುದೋ ಒಂದು ಸಣ್ಣ

ಚಾರಿತ್ರಿಕ ಘಟನೆಯ ಸುತ್ತ ಅದ್ಭುತವಾದ ಸನ್ನಿವೇಶಗಳು ಬೆಳೆದು ತಲೆಮಾರುಗಳ ಮೂಲಕ ಹರಿಯುವಾಗ ಕಥೆಯಾಗಿ ರೂಪುಗೊಂಡರೆ ಅಂಥಹವನ್ನು ಐತಿಹ್ಯವೆನ್ನಲಾಗುತ್ತದೆ. ಇದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದುದು. ಜನಾಂಗಗಳಿಗೆ ಸಂಬಂಧಿಸಿದುದಾಗಿರುತ್ತದೆ. ಮೈಲಹಳ್ಳಿ ರೇವಣ್ಣನವರು ಮಾದಾರ ಜನಾಂಗದ ಬಗ್ಗೆ ಇರುವ ಐತಿಹ್ಯವನ್ನು ಹೀಗೆ ವಿಚಾರ ಮಾಡುತ್ತಾರೆ. "ಮೈಲಹಳ್ಳಿ ರೇವಣ್ಣನವರ ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ ಕೃತಿ ಒಂದು ಜನಾಂಗದ ಹಿನ್ನೆಲೆಯಲ್ಲಿ ಅವರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕುರಿತು ನಡೆಸಿದ ಮೌಖಿಕವಾದ ಒಂದು ಅಧ್ಯಯನ ಎನ್ನಬಹುದು."[5]

**ಕೊನೆ ಟಿಪ್ಪಣಿಗಳು**

1. ವೆಂಕಟ ರತ್ನಮ್. *ತೆಲುಗು–ಇಂಗ್ಲಿಷ್ ಡಿಕ್ಷನರಿ.* ಪುಟ. 978
2. ಕೋಟಿಗಾನಹಳ್ಳಿ ರಾಮಯ್ಯ. *ಸಿಂಧ್‌ಮಾದಿಗರ ಸಂಸ್ಕೃತಿ.* ಪುಟ.36
3. ಪರಮಶಿವಯ್ಯ ಜೀ.ಶಂ. *ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು.* ಪುಟ.283
4. ರಾಜಪ್ಪ ದಳವಾಯಿ. *ಕನ್ನಡ ಸಾಹಿತ್ಯ ಕೋಶ.* ಪುಟ.207
5. ರಾಜೇಗೌಡ, ಹ.ಕ. *ಕಾಲುದಾರಿಯ ಮೈಲುಗಲ್ಲು.* ಪುಟ.275

**ಪರಾಮರ್ಶನ ಗ್ರಂಥಗಳು**


- ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ (ಸಂ.). (2000). *ಜೀಶಂಪ ಅವರ ಜಾನಪದ ಬರಹಗಳು.* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
- ಮೈಲಹಳ್ಳಿ ರೇವಣ್ಣ. (1984). ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ರಾಜಪ್ಪ ದಳವಾಯಿ. (2018). *ಕನ್ನಡ ಸಾಹಿತ್ಯ ಕೋಶ.* ಎಚ್‌ಬಿಟಿ ಪಬ್ಲಿಕೇಷನ್.
- ರಾಜೇಗೌಡ, ಹ.ಕ (ಪ್ರ.ಸಂ.) (2022). ಕಾಲುದಾರಿಯ ಮೈಲಿಗಲ್ಲು. ರಾಜ್ ಪ್ರಕಾಶನ.